OS 116 /2023

ಪಿ.ಡಬ್ಲ್ಯೂ-1

ದಿನಾಂಕ.**11.12.2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಬಿ.ಎಸ್.ವಿ ವಕೀಲರಿಂದಃ**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯ ಆಗಿರುತ್ತದೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ.ನಂ **193/4** ರ **2022-23** ನೇ ಸಾಲಿನ ಪಹಣಿ ಹಾಜರುಪಡಿಸಿದ್ದು ನಿಪಿ**1** ಎಂದು, ಸ.ನಂ **211** ರ **2022-23** ನೇ ಸಾಲಿನ ಪಹಣಿ ಹಾಜರುಪಡಿಸಿದ್ದು ನಿಪಿ**2** ಎಂದು, ಸ.ನಂ **212** ರ **2022-23** ನೇ ಸಾಲಿನ ಪಹಣಿ ಹಾಜರುಪಡಿಸಿದ್ದು ನಿಪಿ**3** ಎಂದು, ವಹಿವಾಟು ನಂ **4** , ಎಂ. ಆರ್ **1/2011-12** ರ ಮ್ಯುಟೇಶನ್ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ**4** ಎಂದು, ಸ.ನಂ **193/4** ರ ಅಟ್ಲಾಸ್ ನಕ್ಷೆಯ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ**5** ಎಂದು,ಸ.ನಂ **211** ರ ಟಿಪ್ಪಣಿ ಪುಸ್ತಕದ ದೃಢಿಕೃತ ನಕಲು ಹಾಜರುಪಡಿಸಿದ್ದು ನಿಪಿ**6** ಎಂದು, ಸ.ನಂ **212** ರನಕ್ಷೆಯ ಟಿಪ್ಪಣಿ ಪುಸ್ತಕದ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ**7** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಡಿ. ಎನ್. ಹೆಚ್ ವಕೀಲರಿಂದಃ-**

ಪ್ರತಿವಾದಿ ಪರ ವಕೀಲರು ಹಾಜರು ಇದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

**ಓ.ಕೇ. ಸ. ಇ .ಎ . ಒ**

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಹೊಸನಗರ